ಎನ್.ಸಿ.ಡಿ.ಸಿ. ಸಾಲಗಳು	1417.69	1924.78	367.49	508.99	1120.52
ಎಲ್.ಐ.ಸಿ. ಸಾಲಗಳು	849.00	949.00	3395.00	-	2491.00
ಜಿ.ಐ.ಸಿ. ಸಾಲಗಳು	475.00	505.00	2712.97	713.46	857.00

ಈ) ಅಭಿವೃದ್ಧಿ ಉದ್ದೇಶಗಳಿಗೆ ಹಾಗೂ ಯೋಜನಾ ಕಾರ್ಯಕ್ರಮಗಳನ್ನು ಸಾಧಿಸಲು ಈ ಹಣವನ್ನು ವಿನಿಯೋಗಿಸಲಾಗುವುದು.

ಓವರ್ ಡ್ರಾಫ್ಟ್ ಸೌಲಭ್ಯ.

2566 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಉಪ ಮುಖ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಓವರ್ ಡ್ರಾಫ್ಟ್ ಸೌಲಭ್ಯವನ್ನು ರಾಜ್ಯ ಸರ್ಕಾರಗಳು ಬಳಸಿಕೊಳ್ಳುವ ಅವಕಾಶವನ್ನು ಕೇಂದ್ರ ಸರ್ಕಾರ ಯಾವ ವರ್ಷದಿಂದ ಕಲ್ಪಿಸಿಕೊಟ್ಟಿದೆ.

ಆ) ಅಂದಿನಿಂದ ಇಂದಿನವರೆಗೂ ಯಾವ ಯಾವ ವರ್ಷ ಎಷ್ಟೆಷ್ಟು ಕೋಟಿ ರೂಪಾಯಿಗಳನ್ನು ಈ ದಿಸೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಪಡೆದುಕೊಂಡಿದೆ.

ಇ) ಪಡೆದುಕೊಳ್ಳಲು ಕಾರಣಗಳೇನು?

ಶ್ರೀಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು) :

ಅ) ಓವರ್ ಡ್ರಾಫ್ಟ್ ಸೌಲಭ್ಯವನ್ನು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಕೊಡುವುದಿಲ್ಲ. ಈ ಸೌಲಭ್ಯವನ್ನು ರಾಜ್ಯ ಸರ್ಕಾರಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ನೀಡುತ್ತದೆ ಹಾಗೂ ಈ ಸೌಲಭ್ಯವನ್ನು 1950ನೇ ಇಸವಿಯಿಂದ ನೀಡಲಾಗುತ್ತದೆ.

ಆ) 1950ನೇ ಇಸವಿಯಿಂದ ಮಾಹಿತಿಯನ್ನು ಒದಗಿಸಲು ಸಾಧ್ಯವಿಲ್ಲದಿರುವುದರಿಂದ ಕಳೆದ ಹತ್ತು ವರ್ಷಗಳಲ್ಲಿ ರಾಜ್ಯ ಸರ್ಕಾರವು ಪಡೆದುಕೊಂಡಿರುವ ಒ.ಡಿ. ಸೌಲಭ್ಯದ ಬಗ್ಗೆ ವಿವರಣೆಯನ್ನು ಈ ಕೆಳಗೆ ನೀಡಲಾಗಿದೆ.

	(ಲಕ್ಷ ರೂಪಾಯಿಗಳಲ್ಲಿ)
1985-86	73394.11
1986-87	10468.40
1987-88	13307.39
1988-89	9362.99
1989-90	8883.53
1990-91	ಇಲ್ಲ
1991-92	ಇಲ್ಲ
1992-93	7801.07

1993-94	72503.80
1994-95	44669.71
1995-96	ಇಲ್ಲ

ಇ) ಸಾಮಾನ್ಯ ಮತ್ತು ವಿಶೇಷ ಆರ್ಥೋಪಾಯ ಮತ್ತು ಅಗ್ರಿಮಧನ ಸಹಾಯವು ಖಾಲಿಯಾದ ನಂತರ ಓ.ಡಿ.ಯನ್ನು ಪಡೆಯಲಾಗುವುದು. ಸಾಮಾನ್ಯವಾಗಿ ಇದನ್ನು ರಾಜ್ಯ ಸರ್ಕಾರದ ನಗದು ಸ್ಥಿತಿಯು ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ಮಾಮೂಲಿಗಿಂತ ಕಡಿಮೆ ಇದ್ದಾಗ ಪಡೆಯಲಾಗುವುದು.

ವಾಣಿಜ್ಯ ತೆರಿಗೆ ಸಲಹಾ ಮಂಡಳಿ ರಚನೆ

2566 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬದಾಮಿ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ವಾಣಿಜ್ಯ ತೆರಿಗೆ ಸಲಹಾ ಮಂಡಳಿಯನ್ನು ರಚಿಸುವ ಪ್ರಸ್ತಾವನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ಈಗಾಗಲೇ ವಾಣಿಜ್ಯ ತೆರಿಗೆ ಸಲಹಾ ಸಮಿತಿಯನ್ನು ರಚಿಸಲಾಗಿದೆ.

ಪರಿಶಿಷ್ಟ ಜಾತಿಯ ಕೇರಿಗಳಿಗೆ ಟಿ.ವಿ. ಕೊಡುವುದು.

1815 - ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ ಶಹರ) : ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿವರ್ಷ ವಿಧಾನಸಭಾ ಕ್ಷೇತ್ರದಲ್ಲಿಯ ಹರಿಜನ ಕೇರಿಗಳಿಗೆ ಟಿ.ವಿ. ಕೊಡುವುದು ಯಾವ ವರ್ಷದಿಂದ ಪ್ರಾರಂಭವಾಗಿದೆ? ಹಾಗೂ ಈ ವರ್ಷದಲ್ಲಿ ಎಷ್ಟು ಟಿ.ವಿ.ಗಳನ್ನು ಕೊಡಲಾಗುವುದು?

ಆ) ಧಾರವಾಡ ಪಟ್ಟಣ ಮತ ಕ್ಷೇತ್ರದಲ್ಲಿ 1985 ರಿಂದ 1996 ರವರೆಗೆ ಎಷ್ಟು ಟಿ.ವಿ. ಸೆಟ್ಟುಗಳನ್ನು . ನೀಡಲಾಗಿದೆ? (ವರ್ಷವಾರು ವಿವರ ನೀಡುವುದು)

ಇ) ಇದರ ಸದುಪಯೋಗವಾಗುತ್ತಿರುವ ಬಗ್ಗೆ ಯಾವ ಅಧಿಕಾರಿಗಳು ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ? ಹೇಗೆ ಸದುಪಯೋಗವಾಗುತ್ತಿರುವ ಬಗ್ಗೆ ಪ್ರತಿವರ್ಷ ವರದಿಯನ್ನು ನೀಡುತ್ತಿದ್ದಾರೆಯೇ?

ಶ್ರೀ ಎಂ.ಸಿ. ನಾಣಯ್ಯ (ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) 1) 1992-93 ನೇ ಸಾಲಿನಿಂದ ವಿಧಾನಸಭಾ ಕ್ಷೇತ್ರದ ಪರಿಶಿಷ್ಟ ಜಾತಿಯ ಕಾಲೋನಿಗಳಿಗೆ ಟಿ.ವಿ.ಗಳನ್ನು ನೀಡಲು ಪ್ರಾರಂಭ ಮಾಡಲಾಗಿದೆ.

2) ವಾರ್ತಾ ಮತ್ತು ಪ್ರಚಾರ ಇಲಾಖೆಯ ಪ್ರಸಕ್ತ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿಯ ಕಾಲೋನಿಗಳಿಗೆ ಬಣ್ಣದ ದೂರದರ್ಶನ ಸೆಟ್ಟುಗಳನ್ನು ನೀಡಲು 38.00 ಲಕ್ಷರೂ.ಗಳ ಅನುದಾನ ಒದಗಿಸಿದೆ. ಆದರೆ, ವಿಶೇಷ ಘಟಕ ಯೋಜನೆಯಡಿಯ ಇಲಾಖೆಗಳ ಅನುದಾನವನ್ನು ಒಟ್ಟು ಗೂಡಿಸಬೇಕೆಂದು ಆರ್ಥಿಕ ಇಲಾಖೆಯ ತೀರ್ಮಾನಗಳ ಈ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.